## ಇಲ್ಲಿಯವರೆಗೆ



ಹಿಂದೆಲ್ಲ ಭತ್ತ ಕೊಯ್ದು ಬಣವೆ ಹಾಕುವ ಕೆಲಸ ರೂಢಿಯಲ್ಲಿತ್ತು. ಎತ್ತುಗಳನ್ನು ಬಳಸಿ ಗದ್ದೆ ಉಳುವುದು, ರಾತ್ರಿ ಭತ್ತದ ಕಣದಲ್ಲೇ ಮಲಗುವುದು, ಭತ್ತ ರಾಶಿ ಹಾಕಿ ಅದನ್ನು ಕುಟ್ಟುವುದು ಮುಂತಾದ ಕೆಲಸ ತಿಂಗಳುಗಟ್ಟಲೆ ನಡೆಯುತ್ತಿತ್ತು.. ಈಗ ಮೆಷಿನ್‌ಗಳು ಬಂದು ಅಂದಿನ ಸಂಭ್ರಮವೆಲ್ಲ ಮರೆಮಾಚಿದೆ. ಈ ವಿಚಾರವನ್ನು ಆನಂದ ಚಂದನಿಕಾಗೆ ವಿವರಿಸುತ್ತಾನೆ. ಜೋಗೇರ ಜನಾಂಗದವರು ತಂಬೂರಿ ತಂತಿ ಮೀಟುತ್ತಾ ಜಾನಪದ ಹಾಡು ಹಾಡುತ್ತಾ ಮನೆಮನೆಗೆ ತೆರಳಿ ಮನೆಯವರು ಕೊಟ್ಟ ಭತ್ತವನ್ನು ಜೋಳಿಗೆಗೆ ತುಂಬಿಸಿ ಮುಂದೆ ಹೋಗುತ್ತಿದ್ದುದು ಜೀವನದ ಒಂದು ಭಾಗವಾಗಿತ್ತು ಎಂಬುದನ್ನೂ ಸ್ವಾರಸ್ಯಕರವಾಗಿ ತಿಳಿಸುತ್ತಾನೆ. ಇತ್ತ ಶಾಣಪ್ಪನ ಆರೋಗ್ಯ ದಿನೇದಿನೇ ಕ್ಷೀಣಿಸುತ್ತದೆ. ಸೋನುಲತಾ ಆತಂಕ ಹೆಚ್ಚಾಗುತ್ತದೆ. ಒಂದು ದಿನ ಶಾಣಪ್ಪ ಆರೋಗ್ಯ ತೀರಾ ಹದಗೆಟ್ಟು ಆಸ್ಪತ್ರೆ ಸೇರುತ್ತಾನೆ. ಅಲ್ಲೇ ಅಸು ನೀಗುತ್ತಾನೆ.

ಈ ಮಧ್ಯೆ ಚಂದನಿಕಾ ಧಾರಾವಾಹಿ ಶೂಟಿಂಗ್ ಎಂದು ಬಹಳ ಬ್ಯುಸಿಯಾಗಿರುತ್ತಾಳೆ. ನಟನೆಗಾಗಿ ಔರಂಗಾಬಾದ್‌ನಿಂದ ಸೀಮಂತಿನಿ ಕೂಡ ದೇಶ್ವಂತರ ಮನೆಗೆ ಬರುತ್ತಾಳೆ. ಎಲ್ಲರೂ ಆಕೆಯನ್ನು ಸ್ವಾಗತಿಸುತ್ತಾರೆ. ಶೂಟಿಂಗ್ ಮುಗಿದ ಬಳಿಕ ಜೀನ್ಸ್, ಟೀ ಶರ್ಟ್ ತೊಟ್ಟ ಸೀಮಂತಿನಿಯನ್ನು ಆನಂದ ಬೈಕ್‌ನಲ್ಲಿ ಹೊರಗೆ ಸುತ್ತಾಡಲು ಕರೆದುಕೊಂಡು ಹೋಗುತ್ತಾನೆ.

ಹಾಗಂತ, ತೋಟ ಅದು ಇದು ಅಂತ ಆಸ್ತಿ ಚೆನ್ನಾಗೆ ಇದೆ. ಕಮ್ಮಿ ದರ್ಜೆಯ ಕುಟುಂಬವಲ್ಲ. ಆದರೆ ಇದಕ್ಕೆ ಬೇರೆ ವಾರಸುದಾರರೂ ಇದ್ದಾರೆ. ಪಾಲಲ್ಲಿ ಮತ್ತೆ ಪಾಲುಗಳಾಗಿ, ಆಮೇಲೆ ಇವನಿಗೆಷ್ಟು ಉಳಿಯಬಹುದು ಅಂತ ಅವಳ ಮನಸಿನಲ್ಲಿ ಹಾದುಹೋಯಿತು. ಬದಲಾಗುತ್ತಿರುವ ಕಾಲಘಟ್ಟದಲ್ಲಿ ಸಂಸಾರದ ಬೇಡಿಕೆಗಳು ಎಂತವು ಅನ್ನುವ ಪರಿಜ್ಞಾನ ಅವಳಿಗಿತ್ತು. ಆದರೆ ಇದು ಅವನ ತೀರ ವೈಯಕ್ತಿಕ ವಿಷಯ. ತಾನು ಪ್ರಸ್ತಾವಿಸಿದರೆ ಅಸಹಜ ಅನ್ನಿಸಬಹುದು. ಅಧಿಕಪ್ರಸಂಗ ಅಂತ ಅಂದುಕೊಂಡರೆ, ತನ್ನಬಗ್ಗೆ ತಕ್ಷಣ ಕೆಟ್ಟ ಅಭಿಪ್ರಾಯ ಮೂಡಬಹುದು ಅನಿಸಿತು. ಇಂತಹ ಪರಿಸರಕ್ಕೆ ಜೋಡಿಯಾದ ಏಕಾಂತದಲ್ಲಿ, ಹೇಳಬೇಕು ಅಂತ ಮತ್ತೆ ಮತ್ತೆ ಅನಿಸುತ್ತಿದ್ದುದನ್ನು ಮನಸಲ್ಲೆ ಒತ್ತಿಟ್ಟುಕೊಂಡಳು. ಕೆಲ ಹೊತ್ತು ಮಾತಾಡುತ್ತಿದ್ದು ಕತ್ತಲು ಕವಿಯುವ ಸೂಚನೆಯಾದಾಗ ಎದ್ದರು.

ತಾನು ಮರಳಿ ಹೊರಡಲಿರುವುದನ್ನು ರಾತ್ರಿ ಎಲ್ಲರೆದುರು ಪ್ರಸ್ತಾಪಿಸಿದಳು. ಕೆಲದಿನದಿಂದ ಅವಳಿಂದಾಗಿ ಮನೆ ಗಿಲಿಗಿಲಿ ಅನ್ನುತ್ತಿತ್ತು. ಅವಳು ಹೋದರೆ ಮತ್ತೆ ಅದೆ ಮಾಮೂಲು ಚಟುವಟಿಕೆ. ಇನ್ನೂ ನಾಕು ದಿನವಿರಲಿ ಅನ್ನುವ ಅಂತರಂಗದ ಆಸೆಯನ್ನು ವ್ಯಕ್ತಪಡಿಸಿದರು ಬಕುಲಾ. ಆದರೆ ಅವಳಿಗೆ ಸಂಶೋಧನೆಯ ಕೆಲಸದೊತ್ತಡವಿತ್ತು. ಸಮ್ಮತಿಸಬೇಕಾಯಿತು. ಮರುದಿನ ಮಧ್ಯಾಹ್ನ ಹುಬ್ಬಳ್ಳಿಗೆ ಹೋಗಿ ಅಲ್ಲಿಂದ ಮುಂಬಯಿಗೆ ಹೋಗುವವಳಿದ್ದಳು. ರೂಮಿನಲ್ಲಷ್ಟು, ಹೊರಗಷ್ಟು ಅಂತೆಲ್ಲ ಹರಡಿಕೊಂಡಿದ್ದ ತನ್ನ ಬಟ್ಟೆಬರೆ ಸಾಮಾನುಗಳನ್ನು ಜೋಡಿಸಿಕೊಳ್ಳತೊಡಗಿದಳು. ಅವಳು ಒಟ್ಟುಹಾಕಿದ ಕಾಗದಪತ್ರ, ಫೋಟೊಗಳು ಎಲ್ಲವನ್ನು ಒಂದು ಫೋಲ್ಡರಿಗೆ ಹಾಕಿ ಜೋಡಿಸಿಕೊಟ್ಟ ಆನಂದ. ರಾತ್ರಿ, ಬಕುಲಾ ಸ್ವತಃ ನಿಂತು ವಿಶೇಷ ಅಡುಗೆ ಮಾಡಿಸಿದ್ದರು. ಸಿಹಿ, ಖಾರ ಅಂತ ಅಪರೂಪದ ತಿಂಡಿ ಮಾಡಿಸಿದರು.

ಮರುದಿನ ಬೆಳಗ್ಗೆ ಸಮಯ ಮಾತುಕತೆಯಲ್ಲಿ ಕಳೆದುಹೋಯಿತು. ಮಧ್ಯಾಹ್ನ ಹೊರಡುವ ತಯಾರಿಯಾದ ಮೇಲೆ ರೂಮಿನಲ್ಲಿದ್ದ ಸೂಟುಕೇಸುಗಳನ್ನು ತರಲು ಮೆತ್ತಿಗೆ ಹೋದ ಆನಂದ. ಎಲ್ಲಾ ಮುಗಿಸಿದವಳು ಅವನ ಹತ್ತಿರ ಬಂದಳು. 'ಆನಂದ್, ಮುಂದೆ ನಿನಗೆಂದಾದರೂ ಒಳ್ಳೆಯ ಕಂಪನಿಯಲ್ಲಿ ಕೆಲಸಕ್ಕೆ ಸೇರಬೇಕೆನಿಸಿದರೆ ಮೊದಲು ನಂಗೆ ಹೇಳು... ಹೇಳತೀಯಲ್ಲವೇ?' ಕೇಳಿದಳು. ಆಮೇಲೆ ತಟ್ಟನೆ ಅವನನ್ನು ಅಪ್ಪಿಕೊಂಡವಳು ಅವನ ಕೆನ್ನೆಗೆ ಮೃದುವಾಗಿ ಮುತ್ತಿಟ್ಟು, ವೇಗವಾಗಿ ಕೆಳಗಿಳಿದು ಬಂದುಬಿಟ್ಟಳು. ಒಂದುಕ್ಷಣ ಭಾವುಕನಾದ ಆನಂದ ಸುಮ್ಮನೆ ನಿಂತ. ಅಗಲುವ ಸಮಯದಲ್ಲಿ ಭಾವುಕತೆ ಸಹಜ ಅಂದುಕೊಳ್ಳುತ್ತ ಸಾಮಾನು ಎತ್ತಿಕೊಂಡು ಕೆಳಗೆ ತಂದ.

12

ಚಳಿಗಾಲದ ಇಬ್ಬನಿ ಬೆಳ್ಳಗೆ ಹೊಗೆಯಂತೆ ಎಲ್ಲಕಡೆ ಹರಡಿಕೊಂಡಿತ್ತು. ನಾಕುಮಾರು ದೂರವಿದ್ದದ್ದು ಕಾಣುತ್ತಿರಲಿಲ್ಲ. ಆ ನಸುಕಿನಲ್ಲಿ ಅಂಗಳದಲ್ಲಿ ಒಲೆಯೆದುರು ನಿಂತು ಆನಂದ ತಾಮ್ರದ ಹಂಡೆಯಿಂದ ಬೆಂದ ಅಡಕೆಯನ್ನು ತೋಡಿ ಬೆತ್ತದ ಬುಟ್ಟಿಗೆ ಹಾಕುತ್ತಿದ್ದ. ಆಳು ಲಿಂಗ ಬುಟ್ಟಿಯನ್ನು ಹೊತ್ತು ಅಟ್ಟಕ್ಕೆ ಸಾಗಿಸುತ್ತಿದ್ದ. ಬೆಂದ ಅಡಕೆಯಿಂದ ಹೊರಡುವ ಹಬೆ ಪರಿಮಳವೊಂದನ್ನು ಅಲ್ಲೆಲ್ಲ ಹರಡುತ್ತಿತ್ತು. ಕೆಂಪಡಕೆಗೆ ಒಳ್ಳೆಯ ದರ ಬಂದಿತ್ತು. ಅಟ್ಟದ ಮೇಲೆ, ಜಗುಲಿಯ ಮೇಲೆ ಸೇರಿ ಹತ್ತು ಕ್ವಿಂಟಲಷ್ಟಿರಬಹುದು ಒಣಗಿದ ಅಡಕೆ. ಮಾರ್ಕೆಟ್ಟಿಗೆ ಜಾಸ್ತಿ ಸರಕು ಬಂದು ದರ ಇಳಿಯುವ ಮೊದಲು ಒಂದಷ್ಟು ಮಾರಾಟ ಮಾಡಬೇಕು ಅನ್ನುವ ತಯಾರಿಯಲ್ಲಿದ್ದ. ನಿದ್ದೆಯಿಂದೆದ್ದು ಮುಖ ತೊಳೆದು, ತಾಜಾ ಗಾಳಿಗೆಂದು ಹೊರಬಾಗಿಲಿಗೆ ಬಂದ ಚಂದನಿಕಾಗೆ ಒಲೆಯೆದುರು ನಿಂತ ಆನಂದ ಮಸುಕಾಗಿ ಕಂಡ. ನಿನ್ನೆ ಸೀಮಂತಿನಿ ಹೋಗುವಾಗ ಅವಳೊಡನೆ ಮಾತಾಡಲಾಗಿರಲಿಲ್ಲ. ಚಿತ್ರೀಕರಣದ ಕೆಲಸದಲ್ಲಿ ಸುಸ್ತಾಗಿತ್ತು. ಏನಂದುಕೊಂಡಳೋ ಅಂದುಕೊಳ್ಳುವಾಗ ಅಕಸ್ಮಾತ್ತಾಗಿ ಆನಂದನ ದೃಷ್ಟಿ ಅತ್ತ ಹರಿಯಿತು. ಇಬ್ಬನಿಯಲ್ಲಿ ಸ್ಫುಟವಾಗದಿದ್ದರು ಅದು ಯಾರೆಂದು ಗುರುತಿಸಿದ ಆನಂದ ಬಾ ಅನ್ನುವಂತೆ ಕೈಸನ್ನೆ ಮಾಡಿದ.

ಉಳಿದವರೆಲ್ಲ ಮನೆಯೊಳಗಿದ್ದರು. ಒಲೆಯೊಳಗೆ ಬೂದಿಯೊಳಗಿನ ಬಿಸಿ ಬೆಚ್ಚಗೆ ಸೂಸುತ್ತಿತ್ತು. ಏನೋ ಹೇಳುವವರಂತೆ ಕರೆದಾಗಿತ್ತು. ಆದರೀಗ, ಏನು ಹೇಳಬೇಕೆಂದು ತೋಚುತ್ತಿರಲಿಲ್ಲ. ಅಡಕೆ ಕೊಯ್ಲಿನ ಕೆಲಸ, ಅದಕ್ಕು ಹೆಚ್ಚಾಗಿ ಸೀಮಂತಿನಿಯ ಇರುವಿನಿಂದಾಗಿ ಬಿಡುವೇ ಸಿಕ್ಕಿರಲಿಲ್ಲ. ಅವಳೇ ಕೇಳಿದಳು: 'ಸೀಮಂತಿನಿ ಹೋಗುವಾಗ ಎರಡು ಮಾತಾಡಲೂ ಆಗಲಿಲ್ಲ ನಂಗೆ. ಮತ್ಯಾವಾಗ ಬರತಾರಂತೆ?' ಅವನಿಗು ಈಗ ಸಲೀಸಾಯಿತು. 'ಇನ್ನು ಬರೋದು ಸುಳ್ಳು. ಅವಳ ಸಂಶೋಧನೆಗೆ ವಿಷಯ ಸಂಗ್ರಹಿಸೋ ಕೆಲಸ ಇಲ್ಲೀದು ಮುಗೀತು. 'ಆಮೇಲೆ ಅವನೆ '...ಬಿಡುವಿದ್ದರೆ ಹೇಳು, ತೋಟದ ಕಡೆ ಹೋಗೋಣ' ಅಂದ. ಮರುಕ್ಷಣ ತಾನ್ಯಾಕೆ ಹೀಗೆ ಹೇಳಿದೆ ಅನಿಸತೊಡಗಿತು. ತಾನು ಇವಳೊಡನೆ ಮಾತಾಡದೆ ಸುಮಾರು ದಿನವಾಯ್ತು ಅನ್ನುವ